International Journal of Kannada Research
www.kannadajournal.com

ISSN: 2454–5813
IJKR 2017; 3(3): 93-97
© 2017 IJKR
www.kannadajournal.com
Received: 19-05-2017
Accepted: 20-06-2017

**ವಿಜಯಕುಮಾರ ಭೋಗಪ್ಪ ಬೀಳಗಿ**
ಸಂಶೋಧನಾ ವಿದ್ಯಾರ್ಥಿ, ಕನ್ನಡ,
ಅಧ್ಯಯನ ಸಂಸ್ಥೆ, ಗುಲಬರ್ಗಾ
ವಿಶ್ವವಿದ್ಯಾಲಯ, ಕಲಬುರಗಿ

**Correspondence**
**ವಿಜಯಕುಮಾರ ಭೋಗಪ್ಪ ಬೀಳಗಿ**
ಸಂಶೋಧನಾ ವಿದ್ಯಾರ್ಥಿ, ಕನ್ನಡ,
ಅಧ್ಯಯನ ಸಂಸ್ಥೆ, ಗುಲಬರ್ಗಾ
ವಿಶ್ವವಿದ್ಯಾಲಯ, ಕಲಬುರಗಿ

# ದೇವರಾಯ ಇಂಗಳೆಯವರ ವೈಚಾರಿಕ ಸಾಹಿತ್ಯ

**ವಿಜಯಕುಮಾರ ಭೋಗಪ್ಪ ಬೀಳಗಿ**

ಕರ್ನಾಟಕಕ್ಕೆ ಬೆಳಗಾಂವಿಯ ಮೂಲಕ ಡಾ.ಬಾಬಾಸಾಹೇಬರನ್ನು ಪರಿಚಯಿಸದಿದ ಕೀರ್ತಿಯು ಶ್ರೀ ದೇವರಾಯ ಇಂಗಳೆಯವರಿಗೆ ಸಲ್ಲುತ್ತದೆ. ಬಾಬಾಸಾಹೇಬರಿಗಿಂತ ಎರಡು ವರ್ಷ ದೊಡ್ಡವರಗಿದ್ದರು, ಬಾಬಾಸಾಹೇಬರ ಸದಾ ಹಿಂಬಾಲಕರು ಮತ್ತು ಆತ್ಮಿಯರಾಗಿದ್ದರು. ಘುಲೆ ದಂಪತಿಗಳಾಗಿದ್ದ ಮಹಾತ್ಮ ಜ್ಯೋತಿಭಾ ಘುಲೇ ಮತ್ತು ಮಾತೆ ಸಾವಿತ್ರಿಬಾಯಿ ಘುಲೇಯವರ ವಿಚಾರಧಾರೆಗಳನ್ನು ಅತಿತಿಕೊಂಡು ಸಮಾಜದಲ್ಲಿನ ಅಂಧಶ್ರದ್ಧೆ, ಮೂಢನಂಬಿಕೆ, ಸಾಮಾಜಿಕ ಸಂಪ್ರದಾಯಗಳು ಹಾಗೂ ಕಂದಾಚಾರಗಳನ್ನು ಮತ್ತು ದೇವದಾಸಿ ಪದ್ದತಿಯನ್ನು ವಿವರಿಸುತ್ತ, ವಿಶ್ಲೇಷಿಸುತ್ತಾ ಸಾಂಸ್ಕೃತಿಕ ಚರಿತ್ರೆಯನ್ನು ಅರಿತುಕೊಂಡವರಾಗಿದ್ದರು. ಸಮ – ಸಮಾಜದ ನಿರ್ಮಾಣವೇ ಇವರ ಕನಸಾಗಿತ್ತು. ಅದು ಬಾಬಾಸಾಹೇಬರ ಮೂಲಕ ಮಾತ್ರ ಬಗೆ ಹರಿಯುತ್ತದೆ ಎಂದು ಅರಿತಿದ್ದರು. ಹೆಚ್ಚೇನು ವಿದ್ಯೆ ಕಲಿಯದ ದೇವರಾಯ ಇಂಗಳೆಯವರು ತಮ್ಮ ಸ್ವಂತ ಪ್ರಯತ್ನದ ಮೂಲಕ ೫ನೇ ತರಗತಿಯವರೆಗೆ ವಿದ್ಯೆ ಕಲಿತುಕೊಂಡು ಸೃಜನಶೀಲ ಮತ್ತು ಕ್ರಿಯಾಶೀಲ ಬರವಣಿಗೆಯ ಮೂಲಕ ಸಮಾಜದ ಓರೆ–ಕೊರೆಗಳನ್ನು ತಿದ್ದುವ ಮತ್ತು ತಿಳಿಸುವ ಕೆಲಸದಲ್ಲಿ ತೊಡಗಿದ್ದರು. ಕನ್ನಡ ಹಾಗೂ ಮರಾಠಿ ಭಾಷೆಗಳಲ್ಲಿ ಬರವಣಿಗೆ ಮಾಡಿ, ಅಲ್ಪ – ಸ್ವಲ್ಪ ಇಂಗ್ಲೀಷನಲ್ಲಿಯೂ ಬರವಣಿಗೆಯನ್ನು ಮಾಡಿದ್ದಾರೆ. ಸಾಂಸ್ಕೃತಿಕ ಚರಿತ್ರೆಯ ನಾಯಕರಾದ ಡಾ. ಬಾಬಾಸಾಹೇಬ ಅಂಬೇಡ್ಕರ್‌ರವರ ಮಂತ್ರವಾದ ಶಿಕ್ಷಿತ, ಸಂಘಟಿತ, ಹೋರಾಟ ಎಂಬ ಮೂರು ಮಂತ್ರಗಳನ್ನು ಅರಿತು ಮುನ್ನಡೆದರು. ತಮ್ಮ ಅಂತರಂಗದ ಸಿಟ್ಟು ನೋವು ವಿಡಂಭನೆ ಸಾಹಿತ್ಯದ ಮೂಲಕ ಹೊರಹಾಕಿದರು.

ವಾಸ್ತವತೆಯ ಅರಿವನ್ನು ಅರಿತ ದೇವರಾಯ ಇಂಗಳೆಯವರಿಗೆ ಸಮಾಜದ ಸಂಘಟನೆ ಮುಖ್ಯವಾಗಿತ್ತು. ದಲಿತ ಸಮಾಜವನ್ನು ಶೈಕ್ಷಣಿಕವಾಗಿ ಮೇಲೆತ್ತಿ ತರುವುದು ಮತ್ತು ಅವರು ಅನುಸರಿಸಿಕೊಂಡು ಬಂದಿದ್ದ ಸಾಮಾಜಿಕ ಪಿಡಗು ಹಾಗೂ ಮೂಢನಂಬಿಕೆಗಳನ್ನು ತೊರೆಯಬೇಕೆಂಬ ಆಶಯವಿತ್ತು. ಮೂಢನಂಬಿಕೆ ಮತ್ತು ಆಚರಣೆಗಳಿಗೆ ಜ್ಞಾನವೇ ಔಷಧಿಯೆಂಬ ಅರಿವು ಅರಿತ ಇಂಗಳೆಯವರು, ಸಮಾಜ ಪರಿವರ್ತನೆಯ ಚಳುವಳಿಯ ಜೊತೆಗೆ ಸಮಾಜ ಸುಧಾರಣೆಗಾಗಿ ಸಾಹಿತ್ಯವನ್ನು ಬರೆಯಬೇಕಾಯಿತು. ಹೆಚ್ಚು ಶಿಕ್ಷಣ ಪಡೆಯದಿದ್ದರೂ ಬದುಕಿನ ತಲ್ಲಣಗಳು, ಹೋರಾಟದ ಅನುಭವಗಳು ಸಾಹಿತ್ಯದ ಕಡೆಗೆ ಎಳೆದುತಂದವು.

ಇಂಗಳೆಯವರು ಶಸ್ತ್ರ ಮತ್ತು ಶಾಸ್ತ್ರ ಎರಡೂ ನಂಬಿದ್ದರು. ಸಮಾಜ ಸುಧಾರಣೆಯ ಪ್ರಕ್ರಿಯೆಯಲ್ಲಿ ಶಸ್ತ್ರ (ಚಳವಳಿ ಮತ್ತು ಹೋರಾಟ) ಎಷ್ಟು ಮುಖ್ಯವಾಗಿದೆಯೋ, ಅಷ್ಟೇ ಮುಖ್ಯ ಶಾಸ್ತ್ರ (ವಿದ್ಯೆ ಮತ್ತು ಸಾಹಿತ್ಯ)ವೂ ಆಗಿದೆಯೆಂದು ಮನಗಂಡಿದ್ದರು. ದಲಿತ ಸಮಾಜಕ್ಕೆ ಸಾಹಿತ್ಯ, ನಾಟಕ, ಹಾಸ್ಯತೆಯ ಹಾಡುಗಳ ಜೊತೆಗೆ ತಮ್ಮ ದಾರುಣ ಮತ್ತು ಪಶುಸಮಾನವಾದ ಜೀವನ ಪರಿಸ್ಥಿತಿಯನ್ನು ಕಣ್ಣಿಗೆ ಕಟ್ಟಿಕೊಡುವುದು ಮಹತ್ವದ್ದಾಗಿತ್ತು. ಓದು ಬರೆಹ ಬಾರದ ದಲಿತರಿಗೆ ಸುಲಭವಾಗಿ ಮುಟ್ಟುವ ಕಲೆ ನಾಟಕವೆಂದು ಮನಗಂಡ ಇಂಗಳೆಯವರು ನಾಟಕ ಮೂಲಕವಾಗಿಯೇ ತಮ್ಮ ಸಾಹಿತ್ಯ ಕೃತಿಯನ್ನು ಆರಂಭಿಸಿದರು. ೧೯೧೮ರಲ್ಲಿ ‘ಕರ್ನಾಟಕ ಬಹಿಷ್ಕೃತ ಬೋಧಿನಿ’ ಅರ್ಥಾತ್ ‘ಯಲ್ಲಮ್ಮ’ ಎಂಬ ನಾಟಕವನ್ನು ಇಂಗಳೆ ಬರೆದರು. ತಾವೇ ಒಂದು ತಂಡವನ್ನು ಕಟ್ಟಿಕೊಂಡು (ಕರ್ನಾಟಕ ಬಹಿಷ್ಕೃತ ಬೋಧಿನಿ ತಂಡ) ಆ ತಂಡದಿಂದ ಅನೇಕ ಕಡೆಗಳಲ್ಲಿ ನಾಟಕವನ್ನು ಆಡಿಸಿದರು. ನಾಟಕದ ನಿರ್ದೇಶನ ಮತ್ತು ಹಾಡುಗಳನ್ನು ಇಂಗಳೆಯವರೆ ಬರೆದರು. ನಾಟಕದ ವಸ್ತು ದೇವದಾಸಿ ಪದ್ಧತಿಯನ್ನು ವಿರೋಧಿಸುವುದಾಗಿತ್ತು.

ನಾಟಕದಲ್ಲಿ ಇಂಗಳೆ ಹೊಸ ತಂತ್ರವನ್ನು ಅಳವಡಿಸಿದರು. ನಾಟಕದ ಆರಂಭದಲ್ಲಿ ಸ್ವತಃ ಇಂಗಳೆಯವರು ಸ್ಟೇಜಿಗೆ ಬಂದು ದೇವದಾಸಿ ಪದ್ಧತಿ ವಿರುದ್ಧ ಒಂದು ಭಾಷಣವನ್ನು ಮಾಡುತ್ತಿದ್ದರು. ಅದರಲ್ಲಿ ದೇವದಾಸಿ ಪದ್ಧತಿ ಎಷ್ಟು ಹೇಯವಾದುದೆಂದು ಪ್ರೇಕ್ಷಕರಿಗೆ ಮನಗಾಣಿಸಿ ಕೊಡುತ್ತಿದ್ದರು. ಅನಂತರ ನಾಟಕ ಆರಂಭವಾಗುತ್ತಿತ್ತು. ಆರಂಭದ ದೃಶ್ಯದಲ್ಲಿಯೇ ಗರ್ಭಿಣಿಯಾದ ಹೆಂಗಸೊಬ್ಬಳು ತನಗೆ ಹೆಣ್ಣು ಮಗುವಾದರೆ ಅದನ್ನು ತಾನು ಸವದತ್ತಿ ಯಲ್ಲಮ್ಮನಿಗೆ ದೇವದಾಸಿಯಾಗಿ ಬಿಡುತ್ತೇನೆಂದು ಹರಕೆ ಹೋರುತ್ತಾಳೆ. ಅದನ್ನು ಆಕೆಯ ಗಂಡ ವಿರೋಧಿಸುತ್ತಾನೆ.

ಗಂಡ: ನಾವೆಲ್ಲರೂ ಆ ತಾಯಿ ಯಲ್ಲಮ್ಮನ ಮಕ್ಕಳು. ಯಾವ ತಾಯಿಯಾದ್ರೂ ತನ್ನ ಮಕ್ಕಳು ಹೇಲಿನ್ಯಾಗ, ರೊಚ್ಚಿನ್ಯಾಗ ಸಿಗಬೇಕಂತ ಬಯಸ್ತಾಳೇನು? ಕಡಿ ಕಡೀಕ್ಕ ದೇವದಾಸಿಯಾದವಳು ಬೀದಿ ನಾಯಾಗಿ ಸಾಯ್ತಾಳ ಆಕಿ ಮೈಯ್ಯಾಗ ಹುಳಾ ಬೀಳ್ತಾವ. ಇದನ್ನ ಯಾವ ತಾಯಿ ಬಯಸ್ತಾಳ? ದೇವದಾಸಿಯರಾದ್ರ ಅದು ತಾಯಿ ಯಲ್ಲವ್ವಗ ಮಾಡೊ ದ್ರೋಹ. ಅದರ ಮಾತ ಬಿಡು ಎಂದು ಗಂಡ ಹೇಳಿದರೆ ಅದಕ್ಕೆ ಹೆಂಡತಿ

ಹೆಂಡತಿ: ಹಿಂಗ ಮಾಡದಿದ್ರ ಯಲ್ಲವ್ವ ನಮಗ ಶಾಪಾ ಹಾಕ್ತಾಳ; ಕಣ್ಣ ಕಳೀತಾಳಾ; ಜೀವಂತ ಸುಡತಾಳ; ನಮ್ಮನ್ನ ಬಡವಿ ಮಾಡ್ತಾಳ ಎಂದು ಹೇಳುತ್ತಾಳೆ.

ಗಂಡ: ಈಗ ಇರೂಕ್ಕಿಂತಲೂ ಹೆಚ್ಚು ಬಡವಿ ಮಾಡ್ತಾಳಾ ನೀ ಹಿಂಗ ಮಾಡಿದ್ರ ನಾ ಸುಮ್ಮನೆ ಇರಾಕಿಲ್ಲ. ಮಕ್ಕಳ ಭಾಗ್ಯ ನೋಡಲಾರ್ದ ತಾಯಿ ತಾಯಿನೇ ಅಲ್ಲ; ನಾ ನನ್ನ ಮಗಳ್ನ ದೇವದಾಸಿ ಹರಕಿಗ ಒಪ್ಪಿಸೂದಿಲ್ಲ..... ಹೀಗೆ ಸಂಭಾಷಣೆ ಮುಂದುವರೆಯುತ್ತದೆ.

ದೇವರಾಯ ನಾಟಕದಲ್ಲಿ ಅನೇಕ ತಂತ್ರಗಳನ್ನು ಬಳಸಿದ್ದರು. ನಾಟಕದ ಸಂಭಾಷಣೆಯಲ್ಲಿ ತನ್ನ ಹೆಸರು ಬರುವಂತೆಯೇ ಸ್ಕ್ರಿಪ್ಟ್ ಬರೆದಿದ್ದರು. ಮೇಲಿನ ಸಂಭಾಷಣೆಯ ನಂತರ ಹೆಂಡತಿ ಗಂಡನಿಗೆ ಕೇಳುತ್ತಾಳೆ: 'ನೀ ಹಿಂಗ ಮಾತಾದ್ದೀ ಅಂದ್ರ ಆ ಇಂಗಳಿ ದೇವ್ರಾ ಭೆಟ್ಟಿ ಆಗಿದ್ದನೇನು? ಇಂಥದ್ದನ್ನೆಲ್ಲ ಪ್ರಚಾರ ಅವನೆ ಮಾಡ್ತಾನಂತ'

ದೇವರಾಯ ಇಂಗಳೆಯವರ ನಾಟಕದ ಸಂಭಾಷಣೆಗಳು ಪ್ರದೇಶದಿಂದ ಪ್ರದೇಶಕ್ಕೆ ಭಿನ್ನವಾಗಿರುತ್ತಿದ್ದವು. ಆಯಾ ಪ್ರದೇಶದ ವಿಶೇಷಗಳನ್ನು ತನ್ನ ದೃಶ್ಯಗಳಲ್ಲಿ ಅಳವಡಿಸಿಕೊಂಡು ಅವನ್ನು ಹೆಚ್ಚು ಜೀವಂತವಾಗಿಸಲು ದೇವರಾಯ ಇಂಗಳೆ ಪ್ರಯತ್ನಿಸುತ್ತಿದ್ದರು.

ನಾಟಕದಲ್ಲಿ ಹೆಂಡತಿಗೆ ಹೆಣ್ಣೇ ಹುಟ್ಟುತ್ತದೆ. ಹಟದಿಂದ ಆಕೆ ಅದನ್ನು ದೇವದಾಸಿ ಬಿಡುವ ಕಾರ್ಯಕ್ರಮ ನಡೆಸಿದಾಗ ಅಲ್ಲಿ ಪೋಲೀಸರ ಆಗಮನವಾಗಿ ಅವರು 'ಅಪರಾಧಿ'ಗಳನ್ನು ಬಂಧಿಸುವರು. ದೇವದಾಸಿ ಪದ್ಧತಿ ಕಾನೂನಿಗೆ ವಿರೋಧವೆಂದು ಪೋಲೀಸರು ಕಾಯ್ದೆಗಳನ್ನು ವಿವರಿಸಿ ನೆರೆದ ಪ್ರೇಕ್ಷಕರಿಗೂ ತಿಳಿ ಹೇಳುವರು. ಈ ಪ್ರಕರಣದಲ್ಲಿ ಗಂಡನೇ ದೂರು ನೀಡಿದ್ದರಿಂದ ಅವನನ್ನು ಪೋಲೀಸರು ಹೊಗಳಿ ಸ್ಟೇಜ್ ಮೇಲೆಯೇ ಅವನಿಗೆ ಹೂಮಾಲೆ ಹಾಕಿ ಸತ್ಕರಿಸುವರು. ಪ್ರತಿಯೊಂದು ದಲಿತ ಗಂಡಸ್ಸು ಮತ್ತು ಹೆಂಗಸ್ಸು ಈ ರೀತಿ ಅನಿಷ್ಟ ಪದ್ಧತಿಯ ವಿರುದ್ಧ ಹೋರಾಡಬೇಕೆಂದೂ, ಅಂಥವರನ್ನು ಸರ್ಕಾರ ಸತ್ಕರಿಸುವುದೆಂದೂ ಹೇಳುವರು.

ನಾಟಕ ಮೂರು ಅಥವಾ ನಾಲ್ಕು ತಾಸುಗಳ ಕಾಲ ನಡೆಯುತ್ತಿತ್ತು. ದೇವರಾಯ ಇಂಗಳೆಯವರೇ ಹಾಡುಗಳನ್ನು ಬರೆದಿದ್ದರು. ವಿಶಿಷ್ಟವಾದ ಚೌಡಕೀ ಸಂಗೀತವನ್ನು ಅಳವಡಿಸಿ ನಾಟಕ ಹೆಚ್ಚು ಆಕರ್ಷಣೀಯವಾಗುವಂತೆ ಮಾಡಿದ್ದರು. ನಾಟಕದ ನಟರೆಲ್ಲರೂ ಇಂಗಳೆಯವರ ಗೆಳೆಯರೇ ಆಗಿದ್ದರು. ಹೆಣ್ಣು ಪಾತ್ರವನ್ನು ಗಂಡಸರೇ ಮಾಡುತ್ತಿದ್ದರು. ಈ ನಾಟಕ ದಲಿತ ಸಮಾಜದಲ್ಲಿ ಬಿರುಗಾಳಿಯನ್ನೇ ಎಬ್ಬಿಸಿತು. ದಲಿತರು ವಾಸಿಸುವ ಪ್ರದೇಶಗಳಲ್ಲಿಯೇ ನಾಟಕಗಳನ್ನು ಆಡಲಾಗುತ್ತಿತ್ತು. ಯಾರನ್ನಾದರೂ ಬೈಯ್ಯಬೇಕೆಂದರೆ ಆಗಿಂದಾಗ್ಗೆ ಸಂಭಾಷಣೆಗಳನ್ನು ಬರೆದು ಅದನ್ನು ನಾಟಕದಲ್ಲಿ ಅಳವಡಿಸಲಾಗುತ್ತಿತ್ತು. ನಾಟಕ ತಂಡದ ಜೊತೆಗೆ ಇಂಗಳೆಯವರೂ ಹೋಗುತ್ತಿದ್ದುದರಿಂದ ಸಂಭಾಷಣೆಗಳನ್ನು ಬರೆಯುವುದರಲ್ಲಿ ಯಾವ ತೊಂದರೆಯೂ ಇರಲಿಲ್ಲ.

ಇಂಗಳೆಯವರ ಇನ್ನೊಂದು ನಾಟಕ 'ರೈತನ ಮಗಳು' ಜಮೀನುದಾರರು ಮತ್ತು ಇನಾಂದಾರ್‌ರಿಂದ ರೈತರ ಮೇಲೆ ಆಗುತ್ತಿದ್ದ ಅನ್ಯಾಯ, ಅತ್ಯಾಚಾರಗಳನ್ನು ಸ್ವತಃ ಅನುಭವಿಸಿದ್ದ ದೇವರಾಯ ಇಂಗಳೆ ಈ ನಾಟಕದಲ್ಲಿ ಅವುಗಳನ್ನು ಬಿಚ್ಚಿಟ್ಟರು. ಆ ಕಾಲದಲ್ಲಿಯೇ 'ಉಳುವವನೇ ಭೂ ಒಡೆಯ' ಎಂಬ ತತ್ವವನ್ನು ಈ ನಾಟಕ ಪ್ರತಿಪಾದಿಸಿತ್ತು.

ಶಮನೇವಾಡಿಯ ರೈತನಿಗೆ ಗೌರಾಬಾಯಿಯೆಂಬ ಚಲುವೆ ಮಗಳಿದ್ದಾಳೆ. ಅವರ ಮೇಲೆ ಊರಿನ ಇನಾಂದಾರ್‌ನ ಕಣ್ಣು. ರೈತ (ಗೌರಬಾಯಿಯ ತಂದೆ) ಇನಾಂದಾರ್‌ನಿಂದ ಸಾಲ ತೆಗೆದುಕೊಂಡಿದ್ದಾನೆ. ಗೌರಾಬಾಯಿಯನ್ನು ಹೇಗಾದರೂ ಮಾಡಿ ಹಾಸಿಗೆಗೆ ಜಗ್ಗಬೇಕೆಂಬುದು ಇನಾಂದಾರ್‌ನ ಯೋಚನೆ. ಆತ ರೈತನನ್ನು ಕರೆದು 'ನನ್ನ ಇಚ್ಛಾ ತಿಳ್ಕೋ; ನೀನು ಮಾಡಿದ ಎಲ್ಲಾ ಸಾಲ ಮಾಫ್ ಮಾಡ್ತೀನಿ' ಎಂದು ಹೇಳುತ್ತಾನೆ. ರೈತ ಆಮಿಷಗಳಿಗೆ ಜಗ್ಗುವುದಿಲ್ಲ. ಇದೇ ಸಂದರ್ಭದಲ್ಲಿ ಖಂಡೋಬಾ ಎಂಬ ದಲಿತ ಯುವಕ ಪ್ರಾಥಮಿಕ ಶಾಲಾ ಶಿಕ್ಷಕನಾಗಿ ಹಳ್ಳಿಗೆ ಬರುತ್ತಾನೆ. ಆತ ಆದರ್ಶ ಸಮಾಜದ ಕನಸು ಕಂಡವ. ಉಳ್ಳವರು ಈ ಬಡವರನ್ನು ಶೋಷಿಸುತ್ತಿರುವುದಕ್ಕೆ ಆತನ ವಿರೋಧವಿದೆ. ಇನಾಂದಾರ್‌ರಂತಹ ಮನುಷ್ಯರ ರಕ್ತ ಹೀರುವ ದುಷ್ಟ ಜನರ ವಿರುದ್ಧ ಹೋರಾಡುವ ಪಣವನ್ನು ಖಂಡೋಬಾ ತೊಟ್ಟಿದ್ದಾನೆ.

ಖಂಡೋಬಾನಿಗೆ ರೈತನ ಪರಿಸ್ಥಿತಿ ತಿಳಿದಾಗ ಆತ ಇನಾಂದಾರ್ ವಿರುದ್ಧ ಪೋಲಿಸು ಕಂಪ್ಲೆಂಟ್ ದಾಖಲಿಸಲು ಹೇಳುತ್ತಾನೆ. ರೈತ ಹೆದರಿ ಒಪ್ಪುವುದಿಲ್ಲ. ಖಂಡೋಬಾ ದೂರನ್ನು ಗೌರಾಬಾಯಿಯಿಂದಲೇ ಕೊಡಿಸುತ್ತಾನೆ. ದೂರಿನ ವಿಚಾರಣೆಗಾಗಿ ಮಾಮಲೇದಾರ್ ಹಳ್ಳಿಗೆ ಬಂದು ಇನಾಂದಾರ್‌ನ ಎಂಜಲನ್ನು ತಿಂದು ಗೌರಾಬಾಯಿಯ ವಿರುದ್ಧವೇ ಮತ್ತು ತನ್ನ ದಾರಿಗೆ ಅಡ್ಡ ಬಂದಿರುವ ಖಂಡೋಬಾನ ವಿರುದ್ಧವೇ ಒಂದು ವರದಿ ಕಳಿಸುತ್ತಾನೆ. ಸೇಡು ತೀರಿಸಿಕೊಳ್ಳುವ ಪಣವನ್ನು ಇನಾಂದಾರ್ ತೊಡುತ್ತಾನೆ. ಖಂಡೋಬಾ ಮತ್ತು ಗೌರಾಬಾಯಿಯರ ನಡುವೆ ಅನೈತಿಕ ಸಂಬಂಧವಿದೆಯೆಂದು ಅಪಪ್ರಚಾರ ಆರಂಭಿಸುತ್ತಾನೆ. ಹಳ್ಳಿಯ ಪಂಚರನ್ನು ಹಿಡಿದು ಎರಡೂ ಕುಟುಂಬಗಳಿಗೆ ಬಹಿಷ್ಕಾರ ಹಾಕಲು ಒತ್ತಾಯಿಸುತ್ತಾನೆ.

ಈ ಬೆಳವಣಿಗೆಯಿಂದ ದಿಕ್ಕು ತೋಚದಂತಾದ ಖಂಡೋಬಾ ಮತ್ತು ಗೌರಾಬಾಯಿ ಮುಂಬೈಗೆ ಹೋಗಿ ಡಾ. ಬಿ.ಆರ್.ಅಂಬೇಡ್ಕರ್‌ರನ್ನು ಭೆಟ್ಟಿಯಾಗಿ ಸಹಾಯ ಮಾಡಬೇಕೆಂದು ಕೇಳುತ್ತಾರೆ. ಬಾಬಾಸಾಹೇಬ ಅಂಬೇಡ್ಕರ್‌ರು ಇಬ್ಬರಿಗೂ ಸಹಾಯ ಮಾಡುವ ವಚನ ನೀಡುತ್ತಾರೆ.

ಖಂಡೋಬಾ ಮತ್ತು ಗೌರಾಬಾಯಿ ಮುಂಬೈಗೆ ಹೋಗುತ್ತಿದ್ದಂತೆಯೆ ಇನಾಂದಾರ್ ಅವರಿಬ್ಬರೂ ಓಡಿ ಹೋಗಿದ್ದಾರೆಂದು ಊರಿನಲ್ಲಿ ಸುದ್ದಿ ಹಬ್ಬಿಸುತ್ತಾನೆ.

ಬಾಬಾಸಾಹೇಬ ಅಂಬೇಡ್ಕರ್‌ರ ಜವಾಬ್ದಾರಿ ಮತ್ತು ಮಧ್ಯಸ್ಥಿಕೆಯಿಂದ ಬೆಳಗಾವಿ ಪೋಲೀಸರು ಶಮನೇವಾಡಿಗೆ

ಬಂದು ಊರಿನ ಜನರನ್ನು ಭೆಟ್ಟಿಯಾಗುತ್ತಾರೆ. ಸತ್ಯ ಏನೆಂಬುದು ಅವರಿಗೆ ಗೊತ್ತಾಗುತ್ತದೆ. ಇನಾಂದಾರ್‌ನನ್ನು ಬಂಧಿಸಿ ಅವನು ಜನರಿಂದ ಅನ್ಯಾಯವಾಗಿ ನುಂಗಿದ ಜಮೀನನನ್ನು ಪುನಃ ರೈತರಿಗೆ ನೀಡುತ್ತಾರೆ. ಗೌರಾಬಾಯಿ ಪ್ರಯತ್ನದ ಫಲವಾಗಿ ತಮ್ಮಿಂದ ಬಿಟ್ಟು ಹೋದ ಜಮೀನು ಪುನಃ ತಮಗೆ ವಾಪಸ್ಸು ಬಂದಿತೆಂದು ದಲಿತರು ಗೌರಾಬಾಯಿಗೆ ಧನ್ಯವಾದ ಹೇಳುತ್ತಾರೆ. 'ಈ ಧನ್ಯವಾದಗಳನ್ನು ಖಂಡೋಬಾನಿಗೆ ಹೇಳ್ರಿ ಅವರು ಬಾಬಾಸಾಹೇಬ ಅಂಬೇಡ್ಕರ್‌ರಿಗೆ ಭೆಟ್ಟಿಯಾಗದೇ ಇದ್ದಿದ್ದರೆ, ಇದೆಲ್ಲ ಆಗುತ್ತಿರಲಿಲ್ಲ'ವೆಂದು ಗೌರಾಬಾಯಿ ಹೇಳುತ್ತಾಳೆ.

ಖಂಡೋಬಾನನ್ನು ಹುಡುಕುತ್ತ ಜನರು ಶಾಲೆಗೆ ಬಂದಾಗ ಆತ ವಿದ್ಯಾರ್ಥಿಗಳಿಗೆ ಬುದ್ಧನ ಬಗ್ಗೆ ಪಾಠ ಮಾಡುತ್ತಿರುತ್ತಾನೆ. ಜನರು ಬಂದು ಅವನಿಗೆ ಧನ್ಯವಾದ ಹೇಳುತ್ತಾರೆ. ಕೆಲವರು ಆತನ ಕಾಲು ಮುಟ್ಟಿ ನಮಸ್ಕರಿಸುವರು. ಜನರ ಈ ಭಾವನೆಯಿಂದ ಖಂಡೋಬಾನ ಕಣ್ಣಿನಿಂದ ನೀರು ಹರಿಯುವುದು; ಅದನ್ನು ನೋಡಿ ಗೌರಾಬಾಯಿಯ ಕಣ್ಣು ಒದ್ದೆಯಾಗುತ್ತದೆ. ಇಲ್ಲಿಗೆ ನಾಟಕ ಮುಗಿಯುತ್ತದೆ.

ಈ ನಾಟಕದಲ್ಲಿ ದೇವರಾಯ ಇಂಗಳೆಯವರು ಡಾ. ಬಾಬಾಸಾಹೇಬ ಅಂಬೇಡ್ಕರ್‌ರನ್ನು ಒಂದು ಪಾತ್ರವನ್ನಾಗಿ ಸ್ಟೇಜ್ ಮೇಲೆ ತಂದರು. ಆ ಕಾಲದಲ್ಲಿ ಇಂತಹ ಒಂದು ವಂಚಿತರ'ವನ್ನು ಶಿಕ್ಷಿಸುವುದು/ಕ್ಷಮಿಸುವುದು ಇಂಗಳೆಯವರ ಸೃಜನಶೀಲತೆ ಮಟ್ಟ ಯಾವ ಸ್ತರದಲ್ಲಿತ್ತೆಂದು ಹೇಳಬಹುದು. ದಲಿತರ ಮತ್ತು ಬಡವರ ಸಕಲ ಕಷ್ಟಗಳ ನಿವಾರಣೆಯ ಉತ್ತರಗಳು ಬಾಬಾಸಾಹೇಬರಲ್ಲಿವೆಯೆಂದು ನಾಟಕಕಾರ ಭಾವಿಸಿದ್ದರು. ಅಂಬೇಡ್ಕರ್‌ರ ಪಾತ್ರ ಸೂಟು ಬೂಟು ಹಾಕಿಕೊಂಡು ಸ್ಟೇಜ್ ಮೇಲೆ ಕಾಣಿಸಿಕೊಳ್ಳುತ್ತಿತ್ತು. ಆ ಪಾತ್ರದ ಮೇಕಪ್ಪು ಮತ್ತು ಗೆಟಪ್ಪು ಡಾ. ಅಂಬೇಡ್ಕರ್‌ರನ್ನು ಹೋಲುವ ಎಚ್ಚರಿಕೆಯನ್ನು ದೇವರಾಯ ತೆಗೆದುಕೊಳ್ಳುತ್ತಿದ್ದರು.

ಈ ನಾಟಕ ಸಮಾಜದಲ್ಲಿ ಬಹುದೊಡ್ಡ ಕ್ರಾಂತಿಯನ್ನು ಉಂಟುಮಾಡಿತು. ಬಡವರ ಭೂಮಿಗಳೆಲ್ಲ ಅನ್ಯಾಯವಾಗಿ ಉಳ್ಳವರ ಪಾಲಾಗಿರುವುದನ್ನು ಈ ನಾಟಕ ಪ್ರತಿಪಾದಿಸಿ, ಅವುಗಳನ್ನು ವಾಪಸ್ಸು ಪಡೆಯಬೇಕಾದರೆ ಅದಕ್ಕೆ ಸಂಘಟಿತವಾಗೋದೊಂದು ಪ್ರಯತ್ನ ಬೇಕೆಂಬುದನ್ನು ಹೇಳಿತು. ನಾಟಕದ ಸಂಭಾಷಣೆಗಳೆಲ್ಲ ಪ್ರಭಾವಶಾಲಿಯಾಗಿದ್ದರಿಂದ ಜನರು ಬಲು ಆಸಕ್ತಿಯಿಂದ ಈ ನಾಟಕವನ್ನು ನೋಡುತ್ತಿದ್ದರು. ನಾಟಕದ ವಸ್ತು ತಿಳಿದುಕೊಂಡ ಇನಾಂದಾರ್‌ರು ಮತ್ತು ಜಮೀನುದಾರರು ನಾಟಕ ಬಂದ್ ಮಾಡಿಸುವ ಪ್ರಯತ್ನವನ್ನು ಮಾಡಿದರು. ದೇವರಾಯ ಇಂಗಳೆ ಇದಾವುದಕ್ಕೂ ಜಗ್ಗದೇ ಪೊಲೀಸ್ ಸಹಾಯ ಪಡೆದು ನಾಟಕ ಪ್ರದರ್ಶಿಸಿದರು. ಈ ನಾಟಕದಿಂದ ಇಂಗಳೆ ಗಡಿಭಾಗದ ಜನರ ಮನೆ ಮಾತಾದರು.

ಜೀವಂತವಾಗಿರುವ ವ್ಯಕ್ತಿಯನ್ನು ನಾಟಕದ ಪಾತ್ರವನ್ನಾಗಿಸಿ ಅವರನ್ನು ಸ್ಟೇಜಿಗೆ ತರುವ ಇಂಗಳೆಯವರ ಪ್ರತಿಭೆ ಅನನ್ಯವಾದುದು. ಈ ನಾಟಕ ೧೯೨೪ರ ಸುಮಾರಿನಲ್ಲಿ ಬರೆದಿದ್ದರೂ, ಅದರಲ್ಲಿ ದಲಿತ ಶಿಕ್ಷಕ ಖಂಡೋಬಾ ಕೊನೆಯಲ್ಲಿ ಬುದ್ಧನ ಬಗ್ಗೆ ಪಾಠ ಮಾಡುವ ದೃಶ್ಯ, ೧೯೫೬ರಲ್ಲಿ ಡಾ. ಬಾಬಾಸಾಹೇಬ ಅಂಬೇಡ್ಕರ್‌ರು ಬೌದ್ಧ ಧರ್ಮಕ್ಕೆ ಮತಾಂತರಗೊಳ್ಳುವ ಪೂರ್ವ ಸೂಚನೆಯಂತೆ ಬರುತ್ತದೆ. 'ಉಳುವವನೇ ಹೊಲದ ಒಡೆಯ' ಎಂಬ ದೇವರಾಜ ಅರಸು ಕಂಡ ಕನಸಿನ ಮೂಲದ ಬೀಜ ಈ ನಾಟಕದಲ್ಲಿದೆಯೆಂದು ಅನ್ನಿಸುತ್ತದೆ. ಖಂಡೋಬಾ ಇನಾಂದಾರನನ್ನು ಕೇಳುತ್ತಾನೆ:

"ಈ ಜಮೀನು ನಿಮ್ಮದಂತ ಆ ದೇವರು ಏನ್ ಕಾಗದಾ ಪತ್ರಾ ಕೊಟ್ಟು ನಿಮ್ಮನ್ನು ಈ ಭೂಮಿಮ್ಯಾಗ ಕಳಿಸ್ಯಾನೇನು? ನಾವು ಈ ಭೂಮಿಗ ಹ್ಯಾಂಗ್ ಬಂದ್ವೋ, ನೀವೂ ಹಂಗ ಬಂದ್ರಿ. ಫರ್ಕ ಇಷ್ಟ; ನಾವು ಗುಡಿಸಲದೊಳ್ಗ ಹುಟ್ಟಿದ್ರ ನೀವು ಬಂಗ್ಲೆಯೊಳಗ ಹುಟ್ಟಿದ್ರಿ.

ಮೂಲದೊಳ್ಗ ಈ ಜಮೀನು ನಮ್ಮದು; ಬಡತನದ ಕಾರಣಕ್ಕ ಈಗ ಅದು ನಿಮ್ಮ ಕಡಿಕ್ಕ ಇರಬೌದು. ಅದರ ಮ್ಯಾಲ ನಿಮ್ಮ ಹಕ್ಕು ಇರಬೌದು; ಆದ್ರ ಅದರ ಮ್ಯಾಲ ನಮ್ಮ ಪ್ರೀತಿ ಐತಿ. ಅದು ನಮ್ಮ ತಾಯಿ ಇದ್ದಾಂಗ. ತಾಯಿಯನ್ನು ಯಾವನಾರಾ ಬ್ಯಾರೆಯವರಿಗೆ ಬಿಟ್ಟು ಕೊಡ್ತಾನೇನು? ಏಳೇಳು ಜನ್ಮ ಹೋದ್ರೂ ಅದು ನಿಮ್ಮದಾಗಾಂಗಿಲ." ಎಂಬ ಸಂದೇಶದೊಂದಿಗೆ ನಾಟಕ ಮುಗಿಯುತ್ತದೆ.

ದೇವರಾಯ ಇಂಗಳೆಯವರ ಇನ್ನೊಂದು ನಾಟಕ 'ಸೂಳೆಯ ಮಗಳು' ಇದರಲ್ಲಿ ದಲಿತ ಜಾತಿಗೆ ಸೇರಿದ ದೇವದಾಸಿ ಮುತ್ತವ್ವ ಊರಿನ ಗೌಡ ಅಣ್ಣಾರಾವ್ ಪಾಟೀಲನ ಸೂಳೆಯಾಗುತ್ತಾಳೆ. ಅವನಿಂದ ಅವಳಿಗೆ ರತ್ನವ್ವ ಎಂಬ ಮಗಳು ಹುಟ್ಟುತ್ತಾಳೆ. ಮುತ್ತವ್ವಳ ಯೌವ್ವನ ಜಾರುತ್ತಿದ್ದಂತೆಯೇ ಅಣ್ಣಾರಾವ್ ಪಾಟೀಲ ಅವಳಲ್ಲಿಯ ಆಸಕ್ತಿಯನ್ನು ಕಡಿಮೆ ಮಾಡುತ್ತಾನೆ. ಹೊಟ್ಟೆ ತುಂಬಿಸಿಕೊಳ್ಳಲು ಮುತ್ತವ್ವ ಈಗ ರಸ್ತೆಗೆ ಬಂದು ನಿಂತಿದ್ದಾಳೆ.

ಶಂಕರನೆಂಬ ಶಾಲಾಮಾಸ್ತರ್ ಊರಿಗೆ ಬಂದಿದ್ದಾನೆ. ಆತ ಮುತ್ತವ್ವಳಿಗೆ ರತ್ನವ್ವಳನ್ನು ಶಾಲೆಗೆ ಸೇರಿಸಲು ಮನವೊಲಿಸುತ್ತಾನೆ. ಅವನ ಮಾತಿಗೆ ಮನ್ನಣೆ ಕೊಟ್ಟು ಮುತ್ತವ್ವ ಮಗಳನ್ನು ಶಾಲೆಗೆ ಕಳಿಸುತ್ತಾಳೆ; ಇದು ಊರಿನವರನ್ನು ರೊಚ್ಚಿಗೆಬ್ಬಿಸುತ್ತದೆ. ಎಷ್ಟೇ ಕಷ್ಟ ಬಂದರೂ ಮಗಳನ್ನು ಶಾಲೆಗೆ ಕಳಿಸಲೇಬೇಕೆಂದು ಶಂಕರ ಹೇಳುತ್ತಾನೆ. ಇದರಿಂದ ಮತ್ತೆ ಸಿಟ್ಟಿಗೆದ್ದ ಊರಿನ ಜನರು ಶಂಕರನಿಗೆ ಮುತ್ತವ್ವಳ ಜೊತೆ ಅನೈತಿಕ ಸಂಬಂಧವಿದೆಯೆಂದು ಪುಕಾರು ಹುಟ್ಟಿಸುತ್ತಾರೆ.

ಮುತ್ತವ್ವ ಭಿಕ್ಷೆಗೆ ಹೋದಾಗ ಜನರು ಅವಳನ್ನು ಅವಮಾನಿಸುತ್ತಾರೆ. ಅಣ್ಣಾರಾವ್ ಪಾಟೀಲ ಮುತ್ತವ್ವಳನ್ನು ಕಂಡು 'ಮಗಳನ್ನು ಶಾಲೆಗೇಕೆ ಕಳಿಸುತ್ತಿರುವೆ?' ಎಂದು ಕೇಳುತ್ತಾನೆ. 'ಸೂಳಿಯ ಮಗಳು ಕಲಿತು ಮಾಡುವುದಾದರೂ ಏನು" ಸೂಳಿಯ ಮಗಳೂ ಒಂದಿಲ್ಲೊಂದು ದಿನ ಸೂಳಿ ಆಗಲೇಬೇಕಲ್ಲ?' ಎಂದು ಜರಿಯುತ್ತಾನೆ. ಅವನ ದರ್ಪಕ್ಕೆ ಹೆದರಿದ ಮುತ್ತವ್ವ 'ಆಕಿಗಽ ಈಗ ಆಡೋ ವಯಸು. ಆಡಾಡ್ತಾ ಸಾಲಿಗ ಹೋಗ್ತಳ. ಮುಂದ ಸ್ವಲ್ಪ ದಿವ್ಸದ ನಂತರ ಸಾಲಿ ಬಿಡಸ್ತೇನಿ' ಅಂತ ಹೇಳುತ್ತಾಳೆ.

ಈಗ ರತ್ನವ್ವ ಮುಲ್ಕಿ ಪಾಸ್ ಆಗಿದ್ದಾಳೆ. ಶಂಕರ ಅವಳನ್ನು ಧಾರವಾಡಿಗೆ ಕರೆದುಕೊಂಡು ಹೋಗಿ ಶಿಕ್ಷಕರ ತರಬೇತಿ ಕಾಲೇಜಿಗೆ ಸೇರಿಸುತ್ತಾನೆ. ಅಲ್ಲಿ ತರಬೇತಿ ಮುಗಿಸಿ ರತ್ನವ್ವ ತನ್ನೂರಿಗೆ ಶಿಕ್ಷಕಿಯಾಗಿ ಬರುತ್ತಾಳೆ.

ರತ್ನವ್ವ ಶಿಕ್ಷಕಿಯಾಗಿ ಅದೂ ತಮ್ಮ ಊರಿಗೆ ಬಂದಿದ್ದನ್ನು ಕಂಡು ಅಣ್ಣಾರಾವ್ ಪಾಟೀಲನ ಸಿಟ್ಟು ಆಕಾಶ ಮುಟ್ಟುತ್ತದೆ. ದೇವದಾಸಿ ಮಗಳು ಕಲಿಸುವ ಶಾಲೆಗೆ ತಮ್ಮ ಮಕ್ಕಳನ್ನು ಕಳಿಸಬಾರದೆಂದು ಆತ ಜನರಿಗೆ ಆಜ್ಞಾಪಿಸುತ್ತಾನೆ. ಇದೇ ರೀತಿಯ ಹಲವಾರು ಕಷ್ಟಗಳನ್ನು ಆತ ರತ್ನವ್ವಳಿಗೆ ನೀಡುತ್ತಾನೆ. ಇದರಿಂದ ರೋಸಿಹೋದ ಮುತ್ತವ್ವ 'ನನ್ನ ಮಗಳನ್ನ ಬಿಟ್ಟು ಬಿಡ್ರಿ, ಆಕೀಗ ತ್ರಾಸ್ ಕೊಡಬ್ಯಾಡ್ರಿ' ಎಂದು ಅಂಗಲಾಚುತ್ತಾಳೆ. ಅದಕ್ಕೆ ಅಣ್ಣಾರಾವ್ 'ನಿನ್ನ ಮಗಳನ್ನ ಯಾರ ಮದ್ವಿ ಮಾಡಕೋತಾರ? ಇಂದಿಲ್ಲ ನಾಳೆ ಅಕಿ ದೇವದಾಸಿ ಆಗಾಕಽ ಬೇಕು. ನಾನಽ ಅಕೀನ್ನ ಇಟಗೋತೇನಿ. ಅಕಿ ಹೆಸ್ರಿಗ ಜಮೀನ ಬರ್ದ ಕೊಡ್ತೇನಿ' ಅಂತ ಹೇಳುತ್ತಾನೆ. ಇದರಿಂದ ರೊಚ್ಚಿಗೆದ್ದ ಮುತ್ತವ್ವ 'ರತ್ನವ್ವ ಬ್ಯಾರೆ ಯಾರೂ ಅಲ್ಲರಿ; ಅಕಿ ನಿಮ್ಮ ಮಗಳು; ನಿಮ್ಮಿಂದ ಹುಟ್ಟಿದವಳು. ಮಗಳ ಜೊತೆ ಮಲಗ್ತೇನಂತ ಹೇಳ್ತೀರಲ್ಲ... ನೀವೇನೂ

ಮನುಶ್ಯಾರೋ ಏನ್ ದನಾನೋ?' ಎಂದು ಕೇಳುತ್ತಾಳೆ.
ಅಣ್ಣಾರಾವ ಪಂಚಾಯ್ತಿ ಸೇರಿಸಿ ತಾಯಿ-ಮಗಳು ಇಬ್ಬರನ್ನು ಪಂಚಾಯ್ತಿಗೆ ತರುತ್ತಾನೆ. 'ಇಬ್ಬರೂ ಹಳ್ಳಿಯ ನೀತಿನಿಯಮಗಳನ್ನು ಗಾಳಿಗೆ ತೂರಿದ್ದಾರೆ. ದೇವದಾಸಿಯಾಗಬೇಕಾದವಳು ಶಾಲಾ ಶಿಕ್ಷಕಿಯಾಗಿದ್ದಾಳೆ. ಇದರಿಂದ ಧರ್ಮಕ್ಕೆ ಚ್ಯುತಿ ಬಂದಿದೆಯೆಂದು ಹೇಳುತ್ತಾನೆ. ಪಂಚಾಯ್ತಿಯು ತಾಯಿ-ಮಗಳ ಮೇಲೆ ಬಹಿಷ್ಕಾರ ಹಾಕುತ್ತದೆ.
ರತ್ನವ್ವಳನ್ನು ಮದುವೆಯಾಗಲು ಯಾರೂ ಮುಂದೆ ಬರುವುದಿಲ್ಲ. ಆಗ ಶಂಕರ ಮುಂದೆ ಬಂದು ಪ್ರಾಥಮಿಕ ಶಾಲಾ ಶಿಕ್ಷಕನಾಗಿರುವ ತನ್ನ ಮಗನ ಜೊತೆ ರತ್ನವ್ವಳ ಮದುವೆಯನ್ನು ನೆರವೇರಿಸುತ್ತಾನೆ. ಇಲ್ಲಿಗೆ ಎಲ್ಲವೂ 'ಸತ್ಯಂ ಶುಭಂ' ಆಗುತ್ತದೆ.
ದಲಿತರಲ್ಲಿ ವೈಚಾರಿಕ ಸಂಘರ್ಷವನ್ನು ಮೂಡಿಸುವುದು ಈ ನಾಟಕಗಳ ಮುಖ್ಯ ಉದ್ದೇಶವಾಗಿತ್ತು. ಅಣ್ಣಾರಾವ ಪಾಟೀಲನಿಂದಲೇ ರತ್ನವ್ವ ಹುಟ್ಟಿದ್ದರೂ ಆತ ಅವಳನ್ನು 'ಇಟ್ಟುಕೊಳ್ಳುವ' ಮಾತು ಆಡುತ್ತಾನೆ. ದೇವದಾಸಿಯ ಮಗಳು ಶಾಲಾ ಶಿಕ್ಷಕಿಯಾಗಿದ್ದರಿಂದ ಧರ್ಮಕ್ಕೆ ಕೇಡಾಯಿತೆಂದು ಹೇಳುವುದು ಉಳ್ಳವರು ಧರ್ಮವನ್ನು ತಮ್ಮ ಅನುಕೂಲಕ್ಕೆ ಹೇಗೆ ಬಳಸಿಕೊಳ್ಳುತ್ತಿದ್ದರೆಂಬ ಸತ್ಯವನ್ನು ದೇವರಾಯ ಇಂಗಳುಯವರು ಇಲ್ಲಿ ಬಿಚ್ಚಿಡುತ್ತಾರೆ. ದೇವದಾಸಿಯಾದವಳು ಮದುವೆಯಾಗಬಾರದೆಂಬ ಧಾರ್ಮಿಕ ನಂಬುಗೆಯನ್ನು ಶಂಕರನ ಮೂಲಕ ಇಲ್ಲಿ ಹುಸಿಗೊಳಿಸುತ್ತಾರೆ. ದೇವದಾಸಿ ಪದ್ಧತಿಯನ್ನು ಜೀವಂತವಾಗಿಡಲು ಮೇಲ್ವರ್ಗದವರು ಹೇಗೆ ಶ್ರಮಿಸುತ್ತಾರೆಂಬ ವಿವರಣೆಯನ್ನು ದೇವರಾಯ ಇಂಗಳೆ ನೀಡುತ್ತಾರೆ. ಈ ನಾಟಕಗಳನ್ನು ಅವರು ಸಮಾಜ ಸುಧಾರಣೆಗಾಗಿ ಬರೆದಿದ್ದರೂ ಅವರ ಜನಪರ ದೃಷ್ಟಿ ಅಗಾಧವಾಗಿತ್ತು. ಶಾಲಾ ಶಿಕ್ಷಕನಾಗಿರುವ ಶಂಕರ ದಲಿತನಾಗಿರಲಿಲ್ಲ. ಆದರೆ ಆತ ದಲಿತ ದೇವದಾಸಿಯ ಮಗಳನ್ನು ತನ್ನ ಮಗನಿಗೆ ತಂದುಕೊಳ್ಳುವ ವಿಚಾರವು ಕ್ರಾಂತಿಕಾರಿಯಾದದ್ದು. ದೇವದಾಸಿ ಪದ್ಧತಿಯು ಅತ್ಯಂತ ಕ್ರೂರವಾದುದೆಂದು ಇಂಗಳೆ ತಮ್ಮ ಕೃತಿಗಳ ಮೂಲಕ ತೋರಿಸಿಕೊಟ್ಟರು. ಅದರ ಜೊತೆಗೆಯೇ ಅಂತಹವುಗಳ ವಿರುದ್ಧ ಹೋರಾಡಲು ದಲಿತರಲ್ಲಿ ಜಾಗೃತಗೊಳಿಸಿದರು.
ದೇವರಾಯ ಇಂಗಳೆ ಕನ್ನಡ ಮತ್ತು ಮರಾಠಿಯಲ್ಲಿ ಅನೇಕ ಕವಿತೆಗಳನ್ನು (ಹಾಡುಗಳನ್ನು) ಬರೆದಿದ್ದಾರೆ. ಎಲ್ಲ ಕವಿತೆಗಳಲ್ಲಿಯೂ ಅವರು ಪ್ರಗತಿಪರ ಧೋರಣೆಯನ್ನೇ ತಳೆದಿದ್ದರು. ಹಾಡುಗಳು ಲಯಬದ್ಧವಾಗಿರುವುದರಿಂದ ಅವುಗಳನ್ನು ಸುಲಭವಾಗಿ ಹಾಡಬಹುದಾಗಿವೆ. ಕೆಲವು ಕವಿತೆಗಳಲ್ಲಿ ಅಂಬೇಡ್ಕರ್ ಮತ್ತು ಜ್ಯೋತಿಬಾ ಫುಲೆಯವರನ್ನು ಆರಾಧಿಸಿದ್ದಾರೆ.

ಅವನು ಸೂರ್ಯ
ನಾವು ಅವರ ತುಣುಕುಗಳು

ಎಂದು ಅಂಬೇಡ್ಕರ್‌ರನ್ನು ಸೂರ್ಯನಿಗೆ ಹೋಲಿಸಿ ದಲಿತರನ್ನು ಸೂರ್ಯನ ತುಣುಕುಗಳೆಂದು ಕರೆದಿದ್ದಾರೆ.
ತಮ್ಮ ಕವಿತೆಗಳಲ್ಲಿ ದೇವರನ್ನು, ಧರ್ಮವನ್ನು ಅವರು ಉಗ್ರವಾಗಿ ಖಂಡಿಸಿದ್ದಾರೆ.

ಇವನೆಂತ ದೇವರು
ಸಿರಿವಂತರಿಗಷ್ಟೇ ದರ್ಶನ ಕೊಡುವವನು?

ಎಂದು ಒಂದೆಡೆ ಪ್ರಶ್ನಿಸಿದರೆ, ಇನ್ನೊಂದೆಡೆ

ಮುಂದಿನ ಜನ್ಮದಲ್ಲಿ ಹಾಗೆ ಕತ್ತೆ
ಕುದುರೆ ಏನು ಬೇಕಾದ್ದಾಗಿ ಹುಟ್ಟುವೆ
ಹೊಲೆಯನಾಗಿ ಮಾತ್ರ ಹುಟ್ಟಲಾರೆ

ಎಂದು ದಲಿತ ಜೀವನದ ತಲ್ಲಣಗಳನ್ನು ಬಿಚ್ಚಿಟ್ಟಿದ್ದಾರೆ.

ದೇವರಿಗೆ ದಾಸಿ ಯಾಕೆ ಬೇಕು
ಆ ದಾಸಿ ಸೂಳೇ ಯಾಕೆ ಆಗಬೇಕು?

ಎಂದು ಕೇಳಿ ದೇವದಾಸಿಯಾದವಳು ಸೂಳೆ ಯಾಕಾಗಬೇಕೆಂದು ಪ್ರಶ್ನಿಸುತ್ತಾರೆ.
'ದಲಿತ ಧರ್ಮಕ್ಕೆ ಬಾಬಾ ಸಾಹೇಬರೇ ದಾರಿ-ದಿಕ್ಕು' ಎಂದು ಅಂಬೇಡ್ಕರ್ ಬಗ್ಗೆ ದೇವರಾಯ ಇಂಗಳೆಯವರು ಬರೆದಿದ್ದಾರೆ.

ನೂರು ಜಾತಿಗಳು ಸಾವಿರ ದೇವರುಗಳು
ಲಕ್ಷ ಆಚಾರ
ಕೋಟಿ ಸಂಪ್ರದಾಯ

ಎಂದು ಒಂದೆಡೆ ಹೇಳಿದ್ದಾರೆ.
ಮರಾಠಿ ಭಾಷೆಯಲ್ಲಿಯ ದೇವರಾಯ ಇಂಗಳೆ ಕವಿತೆಗಳನ್ನು ಬರೆದಿದ್ದಾರೆ. ಅವುಗಳಲ್ಲಿಯೂ ಇದೇ ಧ್ವನಿಯನ್ನು ಗುರುತಿಸಬಹುದು.
ಚಿಕ್ಕ ಚಿಕ್ಕ ಡೈರಿಗಳಲ್ಲಿ ಪೆನ್ಸಿಲ್ ಅಥವಾ ಪೆನ್ನಿನಿಂದ ಅವರು ಕವಿತೆಗಳನ್ನು ಬರೆದಿದ್ದಾರೆ. ಒಂದು ಡೈರಿಯಲ್ಲಿ ಇಂಗ್ಲಿಷ್ ಕವಿತೆಯ ನಾಲ್ಕಾರು ಸಾಲುಗಳು ಇವೆ:

God is Light of darkness
God is Love not hatredness
God is Truth not untruth
God is never discriminates Among Creatures

ಇದು ೧೯೩೩ರ ಡೈರಿಯಲ್ಲಿ ಬರೆದ ಸಾಲುಗಳಾಗಿವೆ.
ದಲಿತರ ಜಾಗೃತಿಗಾಗಿ ಮರಾಠಿಯಲ್ಲಿ ನಾಲ್ಕೆಂಟು 'ಪೋವಾಡಾ'ಗಳನ್ನು ಇಂಗಳೆ ಬರೆದಿದ್ದಾರೆ. ಅವರು ಸಂಘಟಿಸಿದ ದಲಿತ ಸಭೆಗಳಲ್ಲಿ ಅವುಗಳನ್ನು ಹಾಡಲಾಗುತ್ತಿತ್ತು. ಅವುಗಳಲ್ಲಿ ದಲಿತರ ಗತಕಾಲದ ಶೌರ್ಯವನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸಲಾಗಿರುತ್ತಿತ್ತು. ದಲಿತರ ಉದ್ಧಾರಕ್ಕಾಗಿ ಅಂಬೇಡ್ಕರ್ ಬಂದಿದ್ದಾರೆಂದೂ ಆ ಹಾಡುಗಳಲ್ಲಿ ಉಲ್ಲೇಖಿಸಲಾಗುತ್ತಿತ್ತು.
ದೇವರಾಯ ಇಂಗಳೆಯವರ 'ಸೂಳೆಯ ಮಗಳು' ನಾಟಕ ಜನರ ಮೇಲೆ ಎಷ್ಟು ಪ್ರಭಾವ ಬೀರಿತೆಂದರೆ ನೇರ್ಲಿ ಎಂಬ ಊರಿನಲ್ಲಿ ಏಳು ಜನ ದೇವದಾಸಿಯರು ತಾವು ಮದುವೆಯಾಗಬಯಸಿರುವುದಾಗಿ ದೇವರಾಯ ಇಂಗಳೆಯವರಿಗೆ ಹೇಳಿದರು. ಅವರಲ್ಲಿ ಆಗೀಗ 'ಗಿರಾಕಿಗಳಾಗಿ ಬರುತ್ತಿದವರೇ ಅವರನ್ನು ಮದುವೆಯಾಗಬಯಸಿದ್ದರು. 'ಸೂಳೆಯ ಮಗಳು' ನಾಟಕದ ಸ್ಟೇಜ್ ಮೇಲೆಯೇ ಈ ಏಳೂ ಜನ ದೇವದಾಸಿಯರ ಲಗ್ನವು ನೆರವೇರಿತು. ಇದು ದೇವರಾಯ ಇಂಗಳೆಯವರ ಸಾಹಿತ್ಯ ಶಕ್ತಿಯನ್ನು ಸಿದ್ಧ ಮಾಡಿ ತೋರಿಸುತ್ತದೆ.

ದೇವರಾಯ ಇಂಗಳೆಯವರ ವೈಚಾರಿಕ ಪ್ರತಿಭೆ ಬಾಬಾಸಾಹೇಬ ಅಂಬೇಡ್ಕರ್‌ರಿಗೂ ಅಚ್ಚರಿಯನ್ನು ಉಂಟು ಮಾಡಿತ್ತು. ಅಂಬೇಡ್ಕರ್‌ರು ವೈಚಾರಿಕ ಮತ್ತು ಕ್ರಾಂತಿಕಾರಿ ವಿಚಾರಗಳಿಗೆ ದೇವರಾಯ ಕಚ್ಚಾ ಮಾಲನ್ನು ಪೂರೈಸಿದ್ದಾರೆ. ಅಲ್ಲಿಂದ ಬಂದ ವಿಚಾರಗಳನ್ನು ಇಲ್ಲಿ ಜಾರಿಗೆ ತರಲು ಯತ್ನಿಸಿದ್ದಾರೆ.

ದೇವದಾಸಿ ಪದ್ಧತಿ ನಿರ್ಮೂಲನೆ ಕಾಯ್ದೆ ಜಾರಿಯಾಗುವುದಕ್ಕಿಂತ ಅನೇಕ ವರ್ಷಗಳ ಮೊದಲೇ ಅವರು ಈ ಪದ್ಧತಿಯ ವಿರುದ್ಧ ಯುದ್ಧ ಹೂಡಿದ್ದರು. ಈ ಪದ್ಧತಿಯನ್ನು ಮಾನಸಿಕವಾಗಿ ಪೊಲೀಸರ ಸಹಾಯದಿಂದ ಹಾಗೂ ಕಾಯ್ದೆಯಿಂದ ಪ್ರತಿಬಂಧಿಸಬಹುದೆಂದು ಜಗತ್ತಿಗೆ ಸಾರಿದರು.

ಹೋರಾಟ ಮತ್ತು ಅಕ್ಷರಗಳ ಸಹಾಯದಿಂದ ದಲಿತ ಚಿಂತನೆ ಮತ್ತು ಸುಧಾರಣೆ ತರಲು ಯತ್ನಿಸಿದ ದೇವರಾಯ ಇಂಗಳೆಯವರನ್ನು ಮರಾಠಿಯ ಆದ್ಯ (ಮೊದಲ) ದಲಿತ ಲೇಖಕರೆಂದು ಮರಾಠಿ ಸಾಹಿತ್ಯ ಮಾನ್ಯ ಮಾಡಿದೆ. ಮರಾಠಿಯಂತೆಯೇ ಅವರು ಕನ್ನಡದ ಆದ್ಯ ದಲಿತ ಮೊದಲ ಸಾಹಿತಿಯೂ ಹೌದು.

**ಆಧಾರ ಗ್ರಂಥಗಳು**


1. ಮೊದಲ ತಲೆಮಾರಿನ ದಲಿತ ಸಾಹಿತಿಗಳು, (ಸಂ) ಡಾ. ಎಂ.ಎಸ್. ಶೇಖರ್.
2. ಕನ್ನಡ ಮರಾಠಿ ದಲಿತ ಸಾಹಿತ್ಯ–ಡಾ. ಸರಜೂ ಕಾಟ್ಕರ್.
3. ಮೊದಲ ದಲಿತ ಲೇಖಕರು–ಸುಬ್ಬು ಹೊಲೆಯಾರ್.
4. ಮೂಲಭಾರತೀಯರು ಒಂದು ಅವಲೋಕನ– ಡಾ. ಎಚ್.ಟಿ. ಪೋತೆ.
5. ದಲಿತ ಮೊದಲ ಲೇಖಕ ದೇವರಾಯ ಇಂಗಳೆ–ಡಾ. ಸರಜೂ ಕಾಟ್ಕರ್
6. ದೇವರಾಯ ಇಂಗಳೆ ಜೀವನ ಮತ್ತು ಸಾಧನೆ–ಡಾ. ಸರಜೂ ಕಾಟ್ಕರ್
7. ಕನ್ನಡ ಸಾಹಿತ್ಯ: ಮೊದಲ ತಲೆಮಾರಿನ ದಲಿತ ಲೇಖಕರು
8. (ಸಂಶೋಧನಾ ಮಹಾಪ್ರಬಂಧ–ಡಾ. ಸುನೀಲಕುಮಾರ ಪಿ. ಕಾಂಬಳೆ)
9. ದಲಿತ ಸಾಹಿತ್ಯ ದರ್ಶನ–(ಸಂ) ಡಾ. ವಿ. ಮುನಿವೆಂಕಟಪ್ಪ.